## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ಶೃಂಗೇರಿ

**ಸಿ.ಸಿ.ನಂಃ 12/ 2026**

**ಫಿರ್ಯಾದುದಾರರುಃ** : ಸರ್ಕಾರದ ಪರವಾಗಿ ಶೃಂಗೇರಿ ಪೋಲೀಸರು,
ಶೃಂಗೇರಿ.

**-: ವಿರುದ್ಧ :-**

**ಆರೋಪಿಃ** : ಶುಭ ಚಂದನ ಎ.ಸಿ.
ಬಿನ್ ಚಂದ್ರಶೇಖರ್,
ವಯಸ್ಸು 31 ವರ್ಷ,
ವಾಸಃ ವಿದ್ಯಾರಣ್ಯಪುರ ಗ್ರಾಮ,
ಶೃಂಗೇರಿ ತಾಲ್ಲೂಕು.

*****

**ದಂಡ ಪ್ರಕ್ರಿಯಾ ಸಂಹಿತೆ ಕಲಂ 351 ರಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿತರ ಹೇಳಿಕೆ**

**ಪ್ರಶ್ನೆ-1** : ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

**ಉತ್ತರ** : ಕೇಳಿದ್ದೇನೆ.

**ಪ್ರಶ್ನೆ-2** : ಅಭಿಯೋಜನೆಯ ಪರವಾಗಿ ಚಾಸಾ-22 ರವರಾದ ಶ್ರೀ ಗುರುದತ್ ಕಾಮತ್, ಸಿ.ಪಿ.ಐ. ನ.ರಾ. ಪುರ ಪೊಲೀಸ್ ಠಾಣೆ ಇವರನ್ನು ಪ್ರಾಸಾ-3 ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ25.11.2025 ರಂದು ವಾಹನ ಸಂಃ ಕೆ.ಎ-18/ಎಂ.ಎ.-1406 ರ ಮಾಲೀಕರಿಗೆ ನೋಟೀಸ್ ನೀಡಿ ಕೃತ್ಯ ನಡೆದ ದಿನ ವಾಹನ ಚಾಲನೆ ಮಾಡುತ್ತಿದ್ದ ಆರೋಪಿಯಾದ ನಿಮ್ಮ ಬಗ್ಗೆ ವರದಿ ಪಡೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ-3** : ಪ್ರಾಸಾ-3 ರವರು ಮುಂದುವರೆದು, ಚಾಸಾ-15 ರವರಿಂದ ಮೃತ ವ್ಯಕ್ತಿಯ ಪಿ.ಎಂ. ವರದಿ ಪಡೆದುಕೊಂಡು ಕಡತಕ್ಕೆ ಅಳವಡಿಸಿರುವುದಾಗಿ ನುಡಿದಿರುತ್ತಾರೆ ಹಾಗೂ ಕೆ.ಎ-18/ಎಂ.ಎ.-1406 ಮತ್ತು ಕೆ.ಎ-18/

ಇ.ಎನ್.-1123 ವಾಹನಗಳ ಆರ್.ಟಿ.ಒ. ವರದಿ ಹಾಗೂ ಗಾಯದ ಪ್ರಮಾಣ ಪತ್ರವನ್ನು ಪಡೆದಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ-4** : ಫ್ರಾಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ, ಆರೋಪಿಯಾದ ನಿಮ್ಮ ಅತಿವೇಗ ಮತ್ತು ಅಜಾಗರೂಕತೆ ವಾಹನ ಚಾಲನೆ ಅಪಘಾತಕ್ಕೆ ಕಾರಣ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರ** : ಸುಳ್ಳು

**ಪ್ರಶ್ನೆ-5** : ನಿಮಗೆ ಈ ಪ್ರಕರಣದ ಬಗ್ಗೆ ನ್ಯಾಯಾಲಯಕ್ಕೆ ಏನಾದರೂ ಹೇಳುವುದು ಇದೆಯೇ ?

**ಉತ್ತರ** : ಇಲ್ಲ

**ಪ್ರಶ್ನೆ-6** : ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

**ಉತ್ತರ** : ಸಾಕ್ಷಿ ಇಲ್ಲ.

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ಧೃಡೀಕರಿಸುತ್ತೇನೆ )

**ದಿನಾಂಕಃ**

**ಸಹಿ/- 25-06-2026**
**(ಶ್ರೀ ಜೀತು ಆರ್. ಎಸ್.)**
**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
**ಶೃಂಗೇರಿ.**

**ಆರೋಪಿಯ ಸಹಿಃ**